# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ ಎ<br>Part –IV A | ಬೆಂಗಳೂರು, ಶನಿವಾರ, ೦೩, ಅಕ್ಟೋಬರ್, ೨೦೨೦ (ಆಶ್ವಯುಜ , ೧೧, ಶಕವರ್ಷ ೧೯೪೨)<br>BENGALURU, SATURDAY, 03, OCTOBER, 2020 (ASHWAYUJA, 11, SHAKAVARSHA, 1942) | ನಂ. ೪೩೧<br>No. 431 |
|---|---|---|


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 57 SHASANA 2020, BENGALURU, DATED:03.10.2020**

The Karnataka Municipal Corporations (Third Amendment) Bill, 2020 ಇದಕ್ಕೆ 2020ರ **ಅಕ್ಟೋಬರ್** ತಿಂಗಳ 01ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ **ಅಧಿನಿಯಮ** ಸಂಖ್ಯೆ:17 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## KARNATAKA ACT 17 OF 2020

(First Published in the Karnataka Gazette Extra-ordinary on the 3rd day of October, 2020)

# THE KARNATAKA MUNICIPAL CORPORATIONS (THIRD AMENDMENT) ACT, 2020

(Received the assent of the Governor on the 1st day of October, 2020)

An Act further to amend the Karnataka Municipal Corporations Act, 1976.

Whereas it is expedient further to amend the Karnataka Municipal Corporations Act, 1976 (Karnataka Act 14 of 1977) for the purposes hereinafter appearing:

Be it enacted by the Karnataka State Legislature in the seventy first year of the Republic of India as follows, namely:-

**1. Short title and commencement.-** (1) This Act may be called the Karnataka Municipal Corporations (Third Amendment) Act, 2020.

(2) It shall come into force at once.

**2. Amendment of section 7.-** In the Karnataka Municipal Corporations Act, 1976 (Karnataka Act 14 of 1977) (hereinafter referred to as the principal Act) in section 7, in sub-section (1) after clause (a), the following proviso shall be inserted, namely:-

"Provided that, the Bruhat Bengaluru Mahanagara Palike the Corporation shall consist of such number of councillors not less than two hundred and twenty five but not more than two hundred and fifty councillors as the Government may, by notification, determine."

**3. Amendment of section 21.-** In section 21 of the principal Act,

(i) in sub-section (1),-

(a) after the words "Government shall", the words "on the recommendation of delimitation commission" shall be inserted;

(b) after clause (a), the following proviso shall be inserted, namely;-

"Provided that, in respect of Bruhat Bengaluru Mahanagara Palike the State Government shall, by notification, divide the city into wards in such manner that area of wards, as far as possible, shall be within the jurisdiction of an Assembly constituency of the State Legislature and no ward shall be divided between Assembly Constituencies of the State Legislature."

(ii) after sub-section (2), the following shall be inserted, namely:-

"(2A) the State Government shall, constitute a delimitation commission consisting of such number of members, as may be prescribed to recommend the State Government, the manner of delimitation of wards in each corporation."

**VAJUBHAI VALA**
**GOVERNOR OF KARNATAKA**

By Order and in the name of
the Governor of Karnataka,

**(K. DWARAKANATH BABU)**
Secretary to Government
Department of Parliamentary Affairs
and Legislation

# ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ
## ಅಧಿಸೂಚನೆ
## ಸಂಖ್ಯೆ: ಸಂವ್ಯಶಾಇ 57 ಶಾಸನ 2020, ಬೆಂಗಳೂರು, ದಿನಾಂಕ:03.10.2020.

The Karnataka Municipal Corporations (Third Amendment) Bill, 2020 ಇದಕ್ಕೆ 2020ರ **ಅಕ್ಟೋಬರ್** ತಿಂಗಳ 01ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ **ಅಧಿನಿಯಮ** ಸಂಖ್ಯೆ:17 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 17**

(2020 ರ ಅಕ್ಟೋಬರ್ ತಿಂಗಳ 03 ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ನಗರ ಪಾಲಿಕೆಗಳ (ಮೂರನೇ ತಿದ್ದುಪಡಿ) ಅಧಿನಿಯಮ, 2020**

(2020 ರ ಅಕ್ಟೋಬರ್ ತಿಂಗಳ 01 ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ನಗರ ಪಾಲಿಕೆಗಳ (ಮೂರನೇ ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 7ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 7ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಎ) ಖಂಡದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಾಲಿಕೆಯು, ಸರ್ಕಾರವು ಅಧಿಸೂಚನೆಯ ಮೂಲಕ ನಿರ್ಧರಿಸಬಹುದಾದಂತೆ ಎರಡು ನೂರಾ ಇಪ್ಪತ್ತೈದಕ್ಕೆ ಕಡಿಮೆಯಲ್ಲದ ಆದರೆ ಎರಡು ನೂರಾ ಐವತ್ತನ್ನು ಮೀರದಷ್ಟು ಕೌನ್ಸಿಲರುಗಳ ಅಂಥ ಸಂಖ್ಯೆಯನ್ನು ಒಳಗೊಳ್ಳತಕ್ಕದ್ದು."

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**3. 21ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 21ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ,-

(ಎ) "ಸರ್ಕಾರವು," ಎಂದ ಪದ ಮತ್ತು ಅಲ್ಪವಿರಾಮ ಚಿಹ್ನೆಯ ತರುವಾಯ "ಗಡಿನಿರ್ಧಾರ ಆಯೋಗದ ಶಿಫಾರಸ್ಸಿನ ಮೇರೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) ಎ) ಖಂಡದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂದರ್ಭದಲ್ಲಿ ಸರ್ಕಾರವು ಅಧಿಸೂಚನೆಯ ಮೂಲಕ ನಗರವನ್ನು, ವಾರ್ಡುಗಳ ಪ್ರದೇಶವು ಸಾಧ್ಯವಾದಷ್ಟು ರಾಜ್ಯ ವಿಧಾನಮಂಡಲದ ವಿಧಾನಸಭಾ ಮತಕ್ಷೇತ್ರ ವ್ಯಾಪ್ತಿಯೊಳಗೆ ಬರುವ ಮತ್ತು ರಾಜ್ಯ ವಿಧಾನಮಂಡಲದ ವಿಧಾನಸಭಾ ಮತಕ್ಷೇತ್ರಗಳ ನಡುವೆ ಯಾವುದೇ ವಾರ್ಡು ವಿಭಜನೆಯಾಗದಂತೆ ಅಂಥ ವಿಧಾನದಲ್ಲಿ ವಾರ್ಡುಗಳನ್ನಾಗಿ ವಿಭಾಗಿಸತಕ್ಕದ್ದು."

(ii) (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2ಎ) ಪ್ರತಿಯೊಂದು ಪಾಲಿಕೆಯ ವಾರ್ಡುಗಳ ಗಡಿನಿರ್ಧಾರದ ವಿಧಾನವನ್ನು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಲು, ನಿಯಮಿಸಬಹುದಾದ ಅಂಥ ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡ ಗಡಿನಿರ್ಧಾರ ಆಯೋಗವನ್ನು ರಾಜ್ಯ ಸರ್ಕಾರವು ರಚಿಸತಕ್ಕದ್ದು."

The above translation of the Karnataka Municipal Corporations (Third Amendment) Act, 2020 (Karnataka Act 17 of 2020) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

ವಜುಬಾಯಿ ವಾಲ
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(**ಕೆ. ದ್ವಾರಕನಾಥ ಬಾಬು**)
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE Date: 2020.10.03 15:46:29 +05'30'